# ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ

## *ಪತ್ರಿಕಾ ಪ್ರಕಟಣೆ*

ಪ್ರಸ್ತುತ 6ನೇ ವೇತನ ಆಯೋಗದ ಶಿಫಾರಸ್ಸುಗಳನ್ನು ಅಳವಡಿಸುವ ಬಗ್ಗೆ ಮುಷ್ಕರ ನಡೆಸುತ್ತಿದ್ದು, ಈ ಸಂಬಂಧ ಸಾರಿಗೆ ನಿಗಮದ ನೌಕರರಿಗೆ ನೀಡುತ್ತಿರುವ ವೇತನದ ಬಗ್ಗೆ ಗೊಂದಲದ ಹೇಳಿಕೆ ಪ್ರಚಾರವಾಗುತ್ತಿದೆ. ಈ ಸಂಬಂಧ ಸಾರಿಗೆ ನಿಗಮದಲ್ಲಿ ಹಾಲಿ ನೀಡುತ್ತಿರುವ ಸವಲತ್ತುಗಳು ಹಾಗೂ ರಾಜ್ಯ ಸರ್ಕಾರದಲ್ಲಿ ಇರುವ ಸವಲತ್ತುಗಳ ವಿವರಗಳನ್ನು ಹಾಗೂ ಸಾರಿಗೆ ನಿಗಮದ ಖಾಯಂ ಚಾಲಕ, ನಿರ್ವಾಹಕರು ಹಾಗೂ ತಾಂತ್ರಿಕ ಸಿಬ್ಬಂದಿಗಳು ಆರಂಭದಲ್ಲಿ ಪಡೆಯುವ ವೇತನವನ್ನು ಈ ಕೆಳಕಂಡಂತೆ ನೀಡಲಾಗಿದೆ.

<u>ನಿಗಮದಲ್ಲಿ ನೌಕರರಿಗೆ ವಿಸ್ತರಿಸಲಾಗಿರುವ ಸೌಲಭ್ಯಗಳ ವಿವರ:</u>

1. <u>ಆರ್ಥಿಕ ಸೌಲಭ್ಯಗಳು</u>

| ವಿವರ | ರಾಜ್ಯ ಸಾರಿಗೆ ನಿಗಮ | ರಾಜ್ಯ ಸರ್ಕಾರ |
|---|---|---|
| ವೇತನ ಪರಿಷ್ಕರಣೆ | ಪ್ರತಿ ನಾಲ್ಕು ವರ್ಷಕ್ಕೊಮ್ಮೆ | ವೇತನ ಆಯೋಗ ರಚನೆಗೊಂಡು ಆಯೋಗದ ವರದಿಯನ್ವಯ |
| ಮುಕ್ತ ವೇತನ ಶ್ರೇಣಿ | ಮುಕ್ತ ವೇತನ ಬಡ್ತಿ ಹೊಂದಿದೆ | 8 ವರ್ಷಕ್ಕೆ ಸ್ಥಗಿತ ವೇತನ ಬಡ್ತಿ ಹೊಂದಿದೆ |
| ಹಾಲಿ ಪಡೆಯುತ್ತಿರುವ ವೇತನ | ಮೂಲ ವೇತನ + ದಿನಾಂಕ 01–07–2017ರಂದು ಪಡೆಯುತ್ತಿದ್ದ ಶೇ. 45.25ರಷ್ಟು ಮೂಲ ತುಟ್ಟಿಭತ್ಯೆ | ಮೂಲ ವೇತನ |
| ತುಟ್ಟಿಭತ್ಯೆ, ಮನೆಬಾಡಿಗೆ ಭತ್ಯೆ. | ರಾಜ್ಯ ಸರ್ಕಾರದ ಮಾದರಿಯಂತೆ (ಮೂಲ ವೇತನ+ಮೂಲ ತುಟಿಭತ್ಯೆ ಸೇರಿ) | ಸರ್ಕಾರ ನಿಗದಿಪಡಿಸಿದಂತೆ (ಮೂಲ ವೇತನದ ಮೇಲೆ) |
| ಗಳಿಕೆ ರಜೆ ಮಿತಿ | ರಾಜ್ಯ ಸರ್ಕಾರದ ಮಾದರಿಯಲ್ಲಿ 300 ದಿನ | 300 ದಿನ |
| ಗಳಿಕೆ ರಜೆ ನಗಧೀಕರಣ | ರಾಜ್ಯ ಸರ್ಕಾರದ ಮಾದರಿಯಲ್ಲಿ ವರ್ಷಕ್ಕೆ 15 ದಿನ | 15 ದಿನ |
| ದೈನಂದಿನ ಪ್ರೋತ್ಸಾಹಧನ | ಸಾರಿಗೆ ಆದಾಯದ ಮೇಲೆ ಶೇ. 2 ರಷ್ಟು (ನಗರ ಸಾರಿಗೆ ಶೇ. 3 ರಷ್ಟು) (ಚಾಲಕ & ನಿರ್ವಾಹಕರಿಗೆ ಸೇರಿ) | ಇರುವುದಿಲ್ಲ |
| | ಪ್ರತಿಷ್ಠಿತ ಸಾರಿಗೆಗಳಲ್ಲಿ ಸೇವೆ ಸಲ್ಲಿಸುವ ಚಾಲಕ, ನಿರ್ವಾಹಕರು ವಿಶೇಷ ನಿರ್ವಹಣಾ ಭತ್ಯೆ. | ಇರುವುದಿಲ್ಲ |

| | | |
|---|---|---|
| ಉಪದಾನ | ಯಾವುದೇ ಮಿತಿಯ ನಿರ್ಬಂಧವಿಲ್ಲದೇ ಉಪದಾನ ನಿಯಮಾವಳಿ ಅಥವಾ ಉಪದಾನ ಕಾಯ್ದೆ (ಕೈಗಾರಿಕಾ ಒಪ್ಪಂದದ ಕ್ಲಾಸ್ ನಂತೆ) ಇವೆರಡರ ಪೈಕಿ ನೌಕರರಿಗೆ ಯಾವುದು ಅನುಕೂಲವೋ ಅದು | ಗರಿಷ್ಟ ರೂ. 20.00 ಲಕ್ಷ |

**ಸಾರಿಗೆ ನಿಗಮದ ಖಾಯಂ ಚಾಲಕ, ನಿರ್ವಾಹಕರು ಹಾಗೂ ತಾಂತ್ರಿಕ ಸಿಬ್ಬಂದಿಗಳು ಆರಂಭದಲ್ಲಿ ಪಡೆಯುವ ವೇತನ**

| ವಿವರ | ಚಾಲಕರು | ನಿರ್ವಾಹಕರು |
|---|---|---|
| ಮೂಲವೇತನ (Starting Basic) | 12400 | 11640 |
| ಮೂಲ ತುಟ್ಟಿಭತ್ಯೆ | 5611 | 5267 |
| ಒಟ್ಟು ಮೂಲ ವೇತನ | 18011 | 16907 |
| ತುಟ್ಟಿಭತ್ಯೆ (ಶೇ 11.25 ಒಟ್ಟು ಮೂಲ ವೇತನದ ಮೇಲೆ) | 2026 | 1902 |
| ಮನೆ ಬಾಡಿಗೆ ಭತ್ಯೆ (ಶೇ.24 ಒಟ್ಟು ಮೂಲ ವೇತನದ ಮೇಲೆ) | 4323 | 4058 |
| ಭವಿಷ್ಯನಿಧಿ | 2404 | 2257 |
| ಇತರೆ ಭತ್ಯೆ, ಓಟಿ ಸೇರಿದಂತೆ | 5184 | 5184 |
| ಒಟ್ಟು | 31948 | 30308 |

| ವಿವರ | ತಾಂತ್ರಿಕ ಸಹಾಯಕ | ಸಹಾಯಕ ಕುಶಲಕರ್ಮಿ | ಕುಶಲಕರ್ಮಿ |
|---|---|---|---|
| ಮೂಲ ವೇತನ (Starting Basic) | 11640 | 12400 | 13970 |
| ಮೂಲ ತುಟ್ಟಿಭತ್ಯೆ | 5267 | 5611 | 6321 |
| ಒಟ್ಟು ಮೂಲ ವೇತನ | 16907 | 18011 | 20291 |
| ತುಟ್ಟಿಭತ್ಯೆ (ಶೇ 11.25 ಒಟ್ಟು ಮೂಲ ವೇತನದ ಮೇಲೆ) | 1902 | 2026 | 2283 |
| ಮನೆ ಬಾಡಿಗೆ ಭತ್ಯೆ (ಶೇ.24 ಒಟ್ಟು ಮೂಲ ವೇತನದ ಮೇಲೆ) | 4058 | 4323 | 4870 |
| ಭವಿಷ್ಯನಿಧಿ | 2257 | 2404 | 2709 |
| ಇತರೆ ಭತ್ಯೆ, ಓಟಿ ಸೇರಿದಂತೆ | 585 | 585 | 585 |
| ಒಟ್ಟು | 25709 | 27349 | 30737 |

ದಿ. 09–04–2021

ಸಹಿ/–
ವ್ಯವಸ್ಥಾಪಕ ನಿರ್ದೇಶಕರು
ಕ.ರಾ.ರ.ಸಾ.ನಿಗಮ